

# ಶೂರ ಬಾಲಕಿ

ಚಿತ್ರ: ಶಶಿಧರ್ ಹಳೇಮನಿ

■ ಕೆ. ಶ್ರೀನಿವಾಸರಾವ್
ಹರಪನಹಳ್ಳಿ

ಚಿತ್ತೂರಿನ ರಾಜಕುಮಾರ ಅರಿಸಿಂಹನಿಗೆ ಬೇಟೆಯಾಡುವ ಹುಚ್ಚು. ಅದೊಂದು ದಿನ ತನ್ನ ಕೆಲ ಸೈನಿಕರೊಂದಿಗೆ ಬೇಟೆಯಾಡಲು ಅಡವಿಗೆ ಹೊರಟ. ಆರಂಭದಲ್ಲಿಯೇ ಒಂದು ಕಾಡು ಹಂದಿ ಕಣ್ಣಿಗೆ ಬಿದ್ದು ಬೆನ್ನಟ್ಟಿ ಹೋದ. ಪ್ರಾಣಭಯದಿಂದ ಆ ಹಂದಿ ದಿಕ್ಕಾಪಾಲಾಗಿ ಓಡಿ ಪಕ್ಕದ ಹೊಲವೊಂದರ ಬೆಳೆಯ ನಡುವೆ ಅಡಗಿ ಕುಳಿತಿತು. ಹೊಲವನ್ನು ಕಾಯುತ್ತಾ ಎತ್ತರದ ಮಂಚಿಕೆಯ ಮೇಲೆ ಕವಣೆ ಹಿಡಿದು ಕುಳಿತಿದ್ದ ತರುಣಿ ಕುದುರೆ ಸವಾರರು ಇತ್ತ ದೌಡಾಯಿಸುತ್ತಿರುವುದನ್ನು ನೋಡಿ ಓಡಿ ಬಂದು ಅವರನ್ನು ತಡೆದಳು. ಎದುರಿಗಿರುವ ವ್ಯಕ್ತಿ ತಮ್ಮನ್ನಾಳುವ ಅರಸುಪುತ್ರ ಎಂಬುದು ಅವಳಿಗೆ ಅರಿವಾಗಿತ್ತು.

ರಾಜಕುಮಾರರೇ, ದಯವಿಟ್ಟು ನಿಲ್ಲಿ, ನಿಮ್ಮ ಕುದುರೆಗಳನ್ನು ಓಡಿಸಿ ನಮ್ಮ ಬೆಳೆ ಹಾಳು ಮಾಡಬೇಡಿರಿ, ಬೇಕಾದರೆ ನಾನೇ ಆ ಕಾಡು ಹಂದಿಯನ್ನು ಕೊಂದು ತಂದು ಕೊಡುತ್ತೇನೆ.

ಎದುರಿಗೆ ನಿಂತ ಸುಂದರ ಬಾಲಕಿಯ ಧೈರ್ಯ ಮೆಚ್ಚುಗೆಯಾದರೂ ಈ ಬಾಲಕಿ ಅದು ಹೇಗೆ ಹಂದಿಯನ್ನು ಬರಿಗೈಲಿ ಬೇಟೆಯಾಡಬಲ್ಲಳು ಎಂಬ ಯೋಚನೆಯಿಂದ ರಾಜಕುಮಾರ ಹಾಗೇ ಆಗಲಿ ಎಂದು ಸಮ್ಮತಿಸಿದ. ಬಾಲಕಿ ಬೆಳೆಯ ದಂಟೊಂದನ್ನು ಕಿತ್ತು ತುದಿ ಚೂಪು ಮಾಡಿ ಹೊಲದ ಬೆಳೆಯ ನಡುವೆ ಹೊಕ್ಕಳು. ಕ್ಷಣಾರ್ಧದಲ್ಲಿ ಹಂದಿಯ ಚೀತ್ಕಾರದೊಂದಿಗೆ ಅದನ್ನೆಳೆದು ತಂದು ಅವರೆದುರು ಚೆಲ್ಲಿದಳು.

ಎಲ್ಲರಿಗೂ ಅತಿ ಆಶ್ಚರ್ಯ! ಆಗಲೇ ಸಂಜೆಯಾಗ ತೊಡಗಿದ್ದುದರಿಂದ ರಾಜಕುಮಾರ ಸೈನಿಕರೊಂದಿಗೆ ವಿಶ್ರಮಿಸಲು ಬಿಡಾರಕ್ಕೆ ತೆರಳಲು ಅಣಿಯಾದ. ಅಷ್ಟರಲ್ಲಿ ಅದೆಲ್ಲಿಂದಲೋ ಚಿರತೆಯೊಂದು ರಾಜಕುಮಾರನ ಕುದುರೆಯ ಮೇಲೆರಗಿ ಅದನ್ನು ಬೀಳಿಸಿತು. ಇನ್ನೇನು ಅದು ರಾಜಕುಮಾರನ ಮೇಲೆ ಹಾರಬೇಕೆನ್ನುವಷ್ಟರಲ್ಲಿ ಒಂದು, ಎರಡು, ಮೂರು ಎಂದು ಸಾಲು ಸಾಲು ಕಲ್ಲುಗಳು ಅದರ ಮುಖಕ್ಕೆ ಪ್ರಹಾರ ಮಾಡಿದವು. ಚಿರತೆ ಎದ್ದೆನೋ, ಬಿದ್ದೆನೋ ಎಂಬಂತೆ ಪಲಾಯನ ಹೇಳಿತು. ರಾಜಕುಮಾರ ಕಲ್ಲುಗಳು ತೂರಿ ಬಂದ ದಿಕ್ಕಿನೆಡೆ ನೋಡಿದ. ಅಲ್ಲಿ ಈ ದಿಟ್ಟ ಬಾಲೆ ಕವಣೆ ಕೋಲು ಹಿಡಿದು ನಿಂತಿದ್ದಳು. ತನ್ನ ಪ್ರಾಣ ಕಾಪಾಡಿದ ಆ ಬಾಲಕಿಯ ಬಳಿ ಬಂದು ಹೇಳಿದ.

ನಿನ್ನ ಸಾಹಸಕ್ಕೆ ಏನಾದರೂ ಬಹುಮಾನ ಕೊಡಬೇಕೆಂದಿದ್ದೇನೆ, ಏನು ಬೇಕು ಕೇಳು ಎಂದ.

ಆ ಬಾಲಕಿ ಹೇಳಿದಳು ಪ್ರಭು ನನಗೇನೂ ಬೇಡ ನಮ್ಮ ರಾಜ್ಯದ ಬಡ ಪ್ರಜೆಗಳ ಮೇಲೆ ತಮ್ಮ ಕೃಪೆ ಇರಲಿ ಎಂದು ಹೇಳಿ ಮನೆಯೆಡೆಗೆ ನಡೆದಳು.

ಮರುದಿನ ಮುಂಜಾನೆ ಅರಮನೆಯಿಂದ ರಾಜಭಟರು ಆ ಬಾಲಕಿಯ ಮನೆಗೆ ಬಂದು ಅವಳನ್ನು ಹಾಗೂ ಅವಳ ತಂದೆಯನ್ನು ಮಹಾರಾಜರು ಕರೆಯುತ್ತಿದ್ದಾರೆಂದು ಕರೆದುಕೊಂಡು ಹೋದರು. ಮಹಾರಾಜರು ಭಯದಿಂದಲೇ ಹೋದ ಇವರನ್ನು ಕುಳ್ಳಿರಿಸಿ, ಆದರಿಸಿ ಆ ಬಾಲಕಿಯನ್ನು ಸೊಸೆಯನ್ನಾಗಿ ಸ್ವೀಕರಿಸುವುದಾಗಿ ತಿಳಿಸಿದರು. ವಿಜೃಂಭಣೆಯಿಂದ ವಿವಾಹವೂ ಜರುಗಿತು. ಮುಂದೆ ಆ ಬಾಲಕಿ ಚಿತ್ತೂರಿನ ರಾಣಿಯಾಗಿ ಜನಪ್ರಿಯಳೆನಿಸಿದಳು. ■